ರಾಜಪುರೋಹಿತರು ಇಬ್ಬರೂ ಸದಸ್ಯರಾಗಿದ್ದರು. ಅವರಿಬ್ಬರ ಅನುಭವಕ್ಕೆ ಬಂದದ್ದೇನೆಂದರೆ, ಆ ಮಂಡಳದಲ್ಲಿ ಬರೀ ಮಹಾರಾಷ್ಟ್ರಕ್ಕೆ ಸಂಬಂಧಿಸಿದ ಇತಿಹಾಸವಷ್ಟೇ ಚರ್ಚೆಗೆ ಬರುತ್ತಿತ್ತು. ಇಬ್ಬರಿಗೂ ಇಂತಹದೊಂದು ಸಂಸ್ಥೆ ಕರ್ನಾಟಕಕ್ಕೆ ಬೇಕೆಂಬ ವಿಚಾರ ಬಂದಿತ್ತು. 1914ರ ದಸರೆಯೆಂದು ಆಲೂರು ಅವರು ಧಾರವಾಡದಲ್ಲಿ 'ಕರ್ನಾಟಕ ಇತಿಹಾಸ ಸಂಶೋಧನ ಮಂಡಳ' ಪ್ರಾರಂಭಿಸಿದರು. ಆದರೆ, ರಾಜಪುರೋಹಿತರು ಆಗ ಸೊರಬ ತಾಲೂಕಿನ ನೆಗವಾಡಿಯ ಶಾನುಭೋಗರ ಮನೆತನದ ತಂದೆ-ತಾಯಿಯಿಲ್ಲದ ನಾಗೂಬಾಯಿಯನ್ನು ಮದುವೆಯಾಗಿ ಅಲ್ಲಿಯೇ ನೆಲೆಸಿದ್ದರು. ಅವರು ಕೊನೆಗೆ 1920ರಲ್ಲಿ ಗಂಟುಮೂಟೆ-ಕುಟುಂಬ ಸಹಿತ ಧಾರವಾಡಕ್ಕೆ ಬಂದು ನೆಲೆಸಿದರು. ಅಲ್ಲಿಂದ ಅವರ ಕೊನೆಗಳಿಗೆವರೆಗೆ ಧಾರವಾಡವೇ ಅವರ ಕರ್ಮಕ್ಷೇತ್ರವಾಗಿತ್ತು. 'ಕರ್ನಾಟಕ ಇತಿಹಾಸ ಸಂಶೋಧನಾ ಮಂಡಳ'ದ ಸದಸ್ಯರಾದರು. ಈ ಮಂಡಳ ಅಲ್ಲಿಯವರೆಗೆ ಏನಾದರೂ ಕಾರ್ಯ ಮಾಡಿತ್ತೆಂಬುದರ ಬಗೆಗೆ ದಾಖಲೆಗಳಿಲ್ಲ. ರಾಜಪುರೋಹಿತರು ಸದಸ್ಯರಾಗಿ ಬಂದಮೇಲೆ ಮುಂದಿನ 20 ವರ್ಷಗಳ ಅವಧಿಯಲ್ಲಿ ಅವರು ಮಾಡಿದ ಬಹಳಷ್ಟು ಕೆಲಸ ಅವರ ಸಂಶೋಧನಾ ಕೌಶಲದ ಬಗ್ಗೆ ಹೇಳುತ್ತದೆ. ಅವರು ಬಹಳಷ್ಟು ಬುದ್ಧಿಮತ್ತೆ ಹಾಗೂ ಪರಿಶ್ರಮ ಪಡುವುದನ್ನು ಸಹಜ ಗುಣಗಳಾಗಿ ಹೊಂದಿದ್ದರು. ಅವರು ಶಾಸನ, ತಾಳೆಗರಿ, ತಾಮ್ರಪಟ, ನಾಣ್ಯಶಾಸ್ತ್ರ ಇವುಗಳನ್ನು ಓದುವುದರಲ್ಲಿ ಪರಿಣತಿ ಸಾಧಿಸಿದ್ದರು. ಹಿರಿಯ ಇತಿಹಾಸ ವಿದ್ವಾಂಸರಾದ ಡಾ. ಶ್ರೀನಿವಾಸ ರಿತ್ತಿಯವರು ಹೇಳುತ್ತಾರೆ: 'ಶ್ರೀ ರಾಜಪುರೋಹಿತರು ಮಾತ್ರ ಈ ಮಂಡಳದ ಕಾರ್ಯವನ್ನು ಗಂಭೀರವಾಗಿ ತೆಗೆದುಕೊಂಡು ಬಹಳಷ್ಟು ಕೆಲಸ ಮಾಡಿದ್ದಾರೆ. ಮಂಡಳದ ಸಂಗ್ರಹಿತ ದಾಖಲೆಗಳಲ್ಲಿ (ತಾಳೆಗರಿ ಇತ್ಯಾದಿ) ನೂರಕ್ಕೆ ತೊಂಬತ್ತಕ್ಕಿಂತಲೂ ಹೆಚ್ಚು ರಾಜಪುರೋಹಿತರು ಸಂಗ್ರಹಿಸಿದ್ದವುಗಳು.'

ನೆಗವಾಡಿಯಲ್ಲಿದ್ದಾಗಲೂ ಅವರು ಕನ್ನಡ ಸಾಹಿತ್ಯ ಪರಿಷತ್ತಿನೊಂದಿಗೆ ನಿಕಟ ಸತತ ಸಂಪರ್ಕ ಹೊಂದಿದ್ದರು. ಅವರ ಬಹಳಷ್ಟು ಸಂಶೋಧನಾ ಲೇಖನಗಳು 'ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ'ಯಲ್ಲಿ



ರಾಜಪುರೋಹಿತರ ಸೃಜನಶೀಲ ಕೆಲಸಗಳಿಗೆ ಜೊತೆಗಾರರಾಗಿದ್ದ ಆಲೂರು ವೆಂಕಟರಾವ್